5142 (6101) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ;

ಆ) ಹಾಗಾದಲ್ಲಿ, ಗುರುತಿಸಿರುವ ಸ್ಥಳದಲ್ಲಿ ಏನಾದರೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ;

ಇ) ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆಗೆ ವ್ಯವಹರಿಸಿದೆಯೇ;

ಈ) ಸರ್ಕಾರವು ಕಳೆದ ಅಧಿವೇಶನದಲ್ಲಿ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯವನ್ನು ನಿಖರವಾದ ಕಾಲಮಿತಿಯಲ್ಲಿ ಪೂರ್ಣಗೊಸುವಂತಹ ಹಂತವನ್ನು ಇನ್ನೂ ತಲುಪಲಾಗಿಲ್ಲವೆಂದು ತಿಳಿಸಿದ್ದು, ಈಗ ನಿಖರವಾದ ಕಾಲಮಿತಿ ತಲುಪಿದೆಯೆ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಯೋಚಿಸಿದೆ.

ಆ) ಈ ಕೆಳಕಂಡ ಸ್ಥಳಗಳನ್ನು ಗುರುತಿಸಲಾಗಿದೆ;

1) ಬಿಜಾಪುರ ತಾಲ್ಲೂಕಿನ ಅರಕೇರಿ ಗ್ರಾಮದ ಸರ್ಕಾರಿ ಜಮೀನು– 450 ಎಕರೆ.

2) ಆಲಿಯ ಬಾದ್ ಕೈಗಾರಿಕೆ ವಸಾಹತು ಪ್ರದೇಶದ 202 ಎಕರೆ.

3) ಬುರಾನಪುರ ಗ್ರಾಮದ ಸರ್ಕಾರಿ ಜಮೀನು ಒಟ್ಟು 457.01 ಎಕರೆ ಹಾಗೂ 82–32 ಎಕರೆ ಖಾಸಗಿ ಜಮೀನನ್ನು ಗುರ್ತಿಸಲಾಗಿದೆ.

ಈ ವರೆಗೆ ಯಾವ ಜಮೀನನ್ನು ಅಂತಿಮವಾಗಿ ಆಯ್ಕೆಮಾಡಿರುವುದಿಲ್ಲ.

ಇ) ಹೌದು.

ಈ) ಇಲ್ಲ.

3144 (5742) ಶ್ರೀ ಸಿಂಧೂರ ಜಿ. ರಾಜಶೇಖರ್ (ಶಿಗ್ಗಾಂವ್): ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸವಣೂರಿನಲ್ಲಿರುವ ಪಶು ಆಸ್ಪತ್ರೆಯ ಕಟ್ಟಡ ಶಿಥಿಲಗೊಂಡಿದ್ದು, ಕಾಂಪೌಂಡ್ ಗೋಡೆ ಸಹ ಶಿಥಿಲಾವಸ್ಥೆಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶಿಗ್ಗಾಂವ್‌ನಲ್ಲಿರುವ ಪಶು ಆಸ್ಪತ್ರೆಯ ಕಟ್ಟಡ ಹಳೆಯದಾಗಿದ್ದು; ಅದು ಸಹ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಮೇಲ್ಕಾಣಿಸಿದ ಶಿಗ್ಗಾಂವ–ಸವಣೂರ ಪಶು ಆಸ್ಪತ್ರೆಯ ಕಟ್ಟಡಗಳನ್ನು ನವೀಕರಣಗೊಳಿಸಲಿಕ್ಕೆ ತೀವ್ರ ಗತಿಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ) ಶಿಗ್ಗಾಂವ–ಸವಣೂರ ತಾಲ್ಲೂಕ್‌ಗಳಲ್ಲಿರುವ ಎಲ್ಲ ಪಶು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ತುಂಬಾ ಇದ್ದು, ಹಲವಾರು ಬಾರಿ ಸಂಬಂಧಪಟ್ಟ ಇಲಾಖೆಗೆ ತಿಳಿಸಿದರೂ ಸಹ ಕೊರತೆ ನೀಗುವ ಕ್ರಮ ಕಾರ್ಯರೂಪಕ್ಕೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ, ಆದಷ್ಟು ತೀವ್ರಗತಿಯಲ್ಲಿ ಸಿಬ್ಬಂದಿ ಕೊರತೆ ಹೋಗಲಾಡಿಸಿ ರೈತಾಪಿ ಜನರಿಗೆ ಸರ್ಕಾರ ಯಾವಾಗ ಅನುಕೂಲ ಮಾಡಿಕೊಡುವುದು?

ಶ್ರೀ ಮಿರಾಜುದ್ದೀನ್. ಎನ್. ಪಟೇಲ್ (ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಬಂದಿದೆ

ಆ) ಬಂದಿದೆ

ಇ) ಶಿಥಿಲಗೊಂಡಿರುವ ಸವಣೂರು ಪಶು ಆಸ್ಪತ್ರೆಯ ಕಟ್ಟಡ ಮತ್ತು ಕಾಂಪೌಂಡ್ ದುರಸ್ಥಿಯ ಕುರಿತು ಸವಣೂರು ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಚರ್ಚೆಯಾಗಿ ಜಿಲ್ಲಾ ಪಂಚಾಯತಿ ಇಂಜನಿಯರಿಂಗ್ ಉಪ ವಿಭಾಗ (ಹಾವೇರಿ) ಯವರಿಂದ ಎಸ್ಟಿಮೇಟ್ ಕೊಡಲು ತಿಳಿಸಲಾಗಿದ್ದು ಸದರಿ ವಿಚಾರ ದಿನಾಂಕ 05.07.2005 ರಂದು ನಡೆದ ಜಿಲ್ಲಾ ಪಂಚಾಯತ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಹ ಚರ್ಚಿಸಲಾಗಿದೆ.

ಶಿಗ್ಗಾಂವ್ ಪಶು ಆಸ್ಪತ್ರೆಯ ಕಟ್ಟಡ ಸಹ ಹಳೆಯದಾಗಿದ್ದು, ಶಿಥಿಲಾವಸ್ಥೆ ಹಾಗೂ ಇಕ್ಕಟ್ಟಿಂ ಜಾಗದಲ್ಲಿರುವ ಕಾರಣ ಸೂಕ್ತ ನಿವೇಶನ ಒದಗಿಸಲು ಶಿಗ್ಗಾಂವ್ ಪಟ್ಟಣ ಪಂಚಾಯತ್‌ಗೆ ಕೋರಲಾಗಿದೆ. ಧಾರವಾಡ ದಕ್ಷಿಣ ಮಾನ್ಯ ಲೋಕಸಭಾ ಸದಸ್ಯರು ಅನುದಾನದಲ್ಲಿ ಹೊಸ ಕಟ್ಟಡ ಕಟ್ಟಲು ಅನುದಾನ ನೀಡುವುದಾಗಿ ತಿಳಿದಿದೆ.

ಈ) – ಬಂದಿದೆ –

ಶಿಗ್ಗಾಂವ್ ಸವಣೂರು ತಾಲ್ಲೂಕುಗಳಲ್ಲಿ ಮಂಜೂರು ಮತ್ತು ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಉ) 60 ಪಶುವೈದ್ಯಾಧಿಕಾರಿಗಳಿಗೆ ಆದೇಶ ಸಂಖ್ಯೆ.ಪಸಂಮಿಾ 207 ಪಸಸೇ 2004 ದಿನಾಂಕ 24.05.2005 ರಲ್ಲಿ ಸಹಾಯ ನಿರ್ದೇಶಕರಾಗಿ ಮುಂಬಡ್ತಿ ನೀಡಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ 191 ಪಶು ವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ.ಪಸಂಮಿಾ 116 ಪಸಸೇ 2005 ದಿನಾಂಕ.30.05.2005 ರಲ್ಲಿ ಸಕ್ರಮಗೊಳಿಸಲಾಗಿದೆ. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರ ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಲು, ಇಲಾಖಾ ಮುಂಬಡ್ತಿ ಸಭೆ ದಿನಾಂಕ 29.06.2005 ರಂದು ನಡೆಸಲಾಗಿದೆ.

ಪಶುವೈದ್ಯಕೀಯ ಪರೀಕ್ಷಕರನ್ನು 50:50 ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

150 ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಭಾರಿ ವಾಹನ ಚಾಲನೆ ಪರವಾನಗಿ ಹೊಂದಿರುವ 10 ಡಿ ದರ್ಜೆ ನೌಕರರಿಗೆ ವಾಹನ ಚಾಲಕರಾಗಿ ಮುಂಬಡ್ತಿ ನೀಡುವ ವಿಚಾರ ಸರ್ಕಾರ ಪರಿಶೀಲನೆಯಲ್ಲಿದೆ.

ಖಾಲಿ ಇರುವ 1384 ಡಿ ದರ್ಜೆನೌಕರರ ಹುದ್ದೆಗಳನ್ನು ಬೇರೆ ಇಲಾಖೆಗಳಿಂದ ಮರು ವಿನ್ಯಾಸದ ಮೂಲಕ ಹಾಗೂ ಅನುಕಂಪಾರ್ಥ ಮೂಲಕ ಭರ್ತಿ ಮಾಡಲಾಗುತ್ತಿದೆ.

ಅನುಬಂಧ –1, ಪ್ರಶ್ನೆ ಸಂಖ್ಯೆ:5742

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಸವಣೂರು ತಾಲ್ಲೂಕು			ಶಿಗ್ಗಾಂವ್ ತಾಲ್ಲೂಕು		
		ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಸಹಾಯಕ ನಿರ್ದೇಶಕರು	1	–	1	2	2	–
2	ಪಶುವೈದ್ಯಾಧಿಕಾರಿಗಳು	8	1	7	7	1	6
3	ಪಶುವೈದ್ಯಕೀಯ ಮೇಲ್ವಿಚಾರಕರು	–	–	–	2	1	1
4	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	6	6	–	6	4	2
5	ಪಶುವೈದ್ಯಕೀಯ ಪರೀಕ್ಷಕರು	1	1	–	7	5	2
6	ಪಶುವೈದ್ಯಕೀಯ ಸಹಾಯಕರು	6	2	4	9	6	3
7	ವಾಹನ ಚಾಲಕರು	1	1	–	2	1	1
8	ಡಿ–ದರ್ಜೆ	15	9	6	25	18	7
	ಒಟ್ಟು	**38**	**20**	**18**	**60**	**38**	**22**

5145 (5743) ಶ್ರೀ ಸಿಂ ಧೂರ ಜಿ. ರಾಜಶೇಖರ್ (ಶಿಗ್ಗಾಂವ್): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸವಣೂರ ತಾಲ್ಲೂಕಿನ ಶಿರಬಡಗಿ ಹಾಗೂ ಕಡಕೋಳ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಬೇಡಿಕೆ ಸರ್ಕಾರದ ಮುಂದೆ ಇದ್ದು, ಇಲ್ಲಿಯವರೆಗೆ ಕಾರ್ಯರೂಪಕ್ಕೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸವಣೂರಿನಲ್ಲಿ ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಬೇಡಿಕೆಯೂ ಸಹ ಸರ್ಕಾರದ ಮುಂದೆ ಇದ್ದು, ಇಲ್ಲಿಯವರೆಗೆ ಕಾರ್ಯರೂಪಕ್ಕೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ತೀವ್ರಗತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಅನುದಾನ ಬಿಡುಗಡೆಗೊಳಿಸಿ ಅನುಷ್ಟಾನಗೊಳಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ;

ಈ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ:ಪಂಗಡಗಳಿಗೆ ಈಗ ನಿಗದಿಪಡಿಸಿರುವ ಗಂಗಾ ಕಲ್ಯಾಣ ಯೋಜನೆ ಸೌಲಭ್ಯಗಳು ಅತೀ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಎರಡೂ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಜನ ಸಂಖ್ಯೆ ಹೆಚ್ಚಾಗಿದ್ದು, ಈ ಸಂಬಂಧವಾಗಿ ಹಲವಾರು ಬಾರಿ ಇಲಾಖೆಗೆ ಲಿಖಿತ ಮೂಲಕ ಕೇಳಿಕೊಂಡರೂ ಸಹ ಸಾಕಷ್ಟು ಸೌಲಭ್ಯಗಳು ಕಾರ್ಯರೂಪಕ್ಕೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಎರಡೂ ತಾಲ್ಲೂಕುಗಳಿಗೆ ಗಂಗಾ ಕಲ್ಯಾಣ ಯೋಜನೆಯ ಹೆಚ್ಚಿನ ಸೌಲಭ್ಯಗಳನ್ನು ಅನುಷ್ಟಾನಗೊಳಿಸಿ, ಫಲಾನುಭವಿಗಳಿಗೆ ಯಾವಾಗ ಸರ್ಕಾರ ಅನುಕೂಲ ಮಾಡಿಕೊಡುತ್ತದೆ.